ಸೆಲೆಬ್ರಿಟಿ ■ ಹನಿ

# ಸೌಂದರ್ಯ ಮತ್ತು ರಾಜಕೀಯ



ಹಿನಾ ರಬ್ಬಾನಿ ಖಾರ್ ಎನ್ನುವ ಹೆಸರು ಈಗ ಭಾರತದಲ್ಲೀಗ ಅತ್ಯಂತ ಜನಪ್ರಿಯ. ಪಾಕಿಸ್ತಾನದಿಂದ ಈ ಹಿಂದೆ ಭಾರತಕ್ಕೆ ಭೇಟಿ ನೀಡಿದ ಯಾವ ರಾಜಕಾರಣಿಗೂ ಇಷ್ಟೊಂದು ಪ್ರಚಾರ ಸಿಕ್ಕಿರಲಿಲ್ಲ. ಸಿಕ್ಕಿದ್ದರೂ ಅದು ನೆಗೆಟಿವ್ ಪ್ರಚಾರವೇ ಆಗಿತ್ತು. ಆದರೆ ಹಿನಾ ರಬ್ಬಾನಿಯ ಒಂದೇ ಒಂದು ಭಾರತ ಭೇಟಿಯ ಕುರಿತು ಮಾಧ್ಯಮಗಳು ಪುಟಗಟ್ಟಳೆ ಬರೆದವು. ಅದಕ್ಕೆ ಕಾರಣ ಆಕೆ ಹೆಣ್ಣು ಅನ್ನುವುದು ಮಾತ್ರವಲ್ಲ, ಸುಂದರಿ ಎನ್ನುವುದೂ ಹೌದು!

ಹಿನಾ ರಬ್ಬಾನಿಗೆ ಇನ್ನೂ 34ರ ಹರೆಯ. ಪಾಕಿಸ್ತಾನದಲ್ಲಿ ಅತ್ಯಂತ ಕಡಿಮೆ ಪ್ರಾಯದ ಸಚಿವೆ; (ಬರ್ತ್‌ಡೇ 19-1-1977) ಮೊದಲ ಮಹಿಳಾ ವಿದೇಶಾಂಗ ಸಚಿವೆ ಎನ್ನುವ ವಿಶೇಷಣಗಳು ಬೇರೆ. ಭಾರತ- ಪಾಕ್ ನಡುವಣ ರಾಜತಾಂತ್ರಿಕ ಸಂಬಂಧ ಹದಗೆಟ್ಟ ಸ್ಥಿತಿಯಲ್ಲಿ ನವದೆಹಲಿಗೆ ಭೇಟಿ ನೀಡಿದ ಹಿನಾ ರಬ್ಬಾನಿ, ಉಭಯ ದೇಶಗಳ ನಡುವಣ ಸೌಹಾರ್ದ ಹೆಚ್ಚಿಸಲು ನೀಡಿದ ಕೊಡುಗೆಯೇನು ಎನ್ನುವುದು ಇನ್ನೂ ಗೊತ್ತಾಗಿಲ್ಲ. ಆದರೆ ಭಾರತದಲ್ಲಿ ಪ್ರತ್ಯೇಕ ರಾಷ್ಟ್ರವನ್ನು ಕೇಳುತ್ತಿರುವ ಕಾಶ್ಮೀರಿ ರಾಜಕಾರಣಿಗಳ ಜತೆಗೆ ನೇರ ಮಾತುಕತೆ ಮಾಡಿದ್ದು ಮಾತ್ರ ವಿಪರ್ಯಾಸವೇ ಸರಿ.

ಲಾಹೋರ್ ವಿಶ್ವವಿದ್ಯಾಲಯದ ಬಿಎಸ್‌ಸಿ (ಆನರ್ಸ್) ಪದವೀಧರೆ ಹಿನಾ, ಆ ಬಳಿಕ ಮೆಸೆಚುಸೆಟ್ಸ್ ವಿ.ವಿ ಯಲ್ಲಿ ಎಂಎಸ್ಸಿ (ಹೋಟೆಲ್ ಮ್ಯಾನೇಜ್‌ಮೆಂಟ್) ಪದವಿ ಪಡೆದರು. ಅಪ್ಪ ಮಹಮ್ಮದ್ ಇಬ್ರಾಹಿಂ ಕೂಡಾ ರಾಜಕಾರಣಿ. 2002ರಲ್ಲಿ ಮೊದಲ ಬಾರಿಗೆ ಪಾಕಿಸ್ತಾನ ಮುಸ್ಲಿಂ ಲೀಗ್‌ನಿಂದ ಟಿಕೆಟ್ ಪಡೆದು ಚುನಾವಣೆಯಲ್ಲಿ ಗೆದ್ದು ಸಂಸತ್ ಪ್ರವೇಶಿಸಿದ ಹಿನಾಗೆ 2008ರಲ್ಲಿ ಮುಸ್ಲಿಂ ಲೀಗ್ ಟಿಕೆಟ್ ನೀಡಲಿಲ್ಲ. ಆಗ ಪಾಕಿಸ್ತಾನ ಪೀಪಲ್ಸ್ ಪಾರ್ಟಿಗೆ (ಪಿಪಿಪಿ) ನೆಗೆದು ಟಿಕೆಟ್ ಪಡೆದು 84 ಸಾವಿರ ಮತಗಳ ಅಂತರದಿಂದ ಚುನಾವಣೆ ಗೆದ್ದವರು ಹಿನಾ. ಪಿಪಿಪಿಯ ಸ್ಥಾಪಕರಲ್ಲಿ ಒಬ್ಬರಾದ ಗುಲಾಂ ಮುಸ್ತಫಾ ಖಾರ್‌ರ ಸೊಸೆಯೂ ಆದ ಹಿನಾ, ಮೊದಲು ಹಣಕಾಸು ಖಾತೆಯ ರಾಜ್ಯ ಸಚಿವೆಯಾಗಿ ಬಜೆಟ್ ಮಂಡಿಸಿದರು. ಬಳಿಕ ವಿದೇಶಾಂಗ ಖಾತೆಯ ರಾಜ್ಯ ಸಚಿವೆಯಾದರು. ಈಗ ವಿದೇಶಾಂಗ ಖಾತೆಯ ಪೂರ್ಣ ಜವಾಬ್ದಾರಿ.

ಎರಡು ಗಂಡು, ಒಂದು ಹೆಣ್ಣು ಮಗುವಿನ ತಾಯಿಯಾಗಿರುವ ಹಿನಾ ರಬ್ಬಾನಿ ಫ್ಯಾಶನ್‌ಪ್ರಿಯೆ ಎನ್ನುವುದು ಬಲ್ಲವರ ಮಾತು. ಭಾರತದಲ್ಲಿ ಪತ್ರಿಕೆಗಳು ಈಕೆಯ ರಾಜತಾಂತ್ರಿಕ ನೈಪುಣ್ಯದ ಬಗ್ಗೆ ಬರೆಯುವ ಬದಲಾಗಿ ಈಕೆಯ 17 ಲಕ್ಷ ರೂಪಾಯಿ ಮೌಲ್ಯದ ಹರ್ಮಸ್ ಬಿರ್ಕಿನ್ ಬ್ರಾಂಡ್‌ನ ವ್ಯಾನಿಟಿ ಬ್ಯಾಗ್ ಬಗ್ಗೆ, ಉಟ್ಟ ಸೀರೆಯ ಬಗ್ಗೆಯೇ ಹೆಚ್ಚು ಬರೆದಿವೆ! ಲಾಹೋರ್ ಪೋಲೊ ಕ್ಲಬ್‌ನಲ್ಲಿ ಈಕೆಯ ಒಡೆತನದ ಪೋಲೊ ಲಾಂಜ್ ಎಂಬ ಪ್ರಸಿದ್ಧ ರೆಸ್ಟೋರೆಂಟಿದೆ. ಸ್ವಂತದ ಕುದುರೆ ಲಾಯವಿದೆ. ಪೋಲೋ ಈಕೆಯ ಅಚ್ಚುಮೆಚ್ಚಿನ ಕ್ರೀಡೆಯಂತೆ. ಖಾಸಗಿ ಸಮಾರಂಭದಲ್ಲಿ ಜೀನ್ಸ್ ಧರಿಸಿ ಓಡಾಡುವ ಹಿನಾ, ಪಾಕಿಸ್ತಾನದಂತಹ ಸಂಪ್ರದಾಯವಾದಿ ರಾಷ್ಟ್ರದಲ್ಲಿ ಸಚಿವೆ ಆಗಿರುವುದೇ ವಿಶೇಷ.

## 'ವೇಗದೂತ'ನ ಮೋಹ



ಬೆನ್ ಜಾನ್ಸನ್! 23 ವರ್ಷಗಳ ಹಿಂದೆ ಇಡೀ ವಿಶ್ವವೇ ಬೆರಳು ಕಚ್ಚುವಂತೆ ಸಿಯೋಲ್ ಒಲಿಂಪಿಕ್ಸ್‌ನಲ್ಲಿ 100 ಮೀಟರ್ ಓಟವನ್ನು ಕೇವಲ 9.79 ಸೆಕೆಂಡುಗಳಲ್ಲಿ ಓಡಿ ಗುರಿಮುಟ್ಟಿದ ಓಟಗಾರ! 'ಮನುಷ್ಯನೊಬ್ಬ ಇಷ್ಟೊಂದು ವೇಗವಾಗಿ ಓಡಲು ಸಾಧ್ಯವಿದೆಯೆ..!' ಎಂದು ಅವತ್ತು ಸಮಸ್ತ ಕ್ರೀಡಾಲೋಕವೇ ನಿಬ್ಬೆರಗಾಗಿ ನೋಡಿತ್ತು. ಆದರೆ ದಾಖಲೆಯ ಸಂಭ್ರಮ ಮುಗಿಯುವ ಮೊದಲೇ -ಬೆನ್ ಜಾನ್ಸನ್ ಉದ್ದೀಪನಾ ಮದ್ದು ಸೇವಿಸಿದ್ದಾನೆ - ಎಂಬ ಸುದ್ದಿ ಬಂತು! ಚಿನ್ನದ ಪದಕ ಕಸಿದುಕೊಂಡರು. ಮುಂದೆಂದೂ ಓಟದ ಟ್ರ್ಯಾಕ್‌ನಲ್ಲಿ ಸ್ಪರ್ಧೆಗೆ ಕಾಣಿಸದಂತೆ ನಿಷೇಧ ಹೇರಿದರು. ಅಲ್ಲಿಗೆ ವೇಗದೂತನ ಬದುಕಿನ ಒಂದು ಅಧ್ಯಾಯ ಕೊನೆಗೊಂಡಿತು.

23 ವರ್ಷಗಳ ಹಿಂದೆ ಹೀಗೆ ಅವಮಾನಿತನಾಗಿ ಓಟದ ಟ್ರ್ಯಾಕ್‌ನಿಂದ ಹೊರಬಿದ್ದ ಬೆನ್ ಜಾನ್ಸನ್ ಈಗ ಗೋವಾಕ್ಕೆ ಬಂದಿದ್ದಾರೆ. ಅವರದ್ದೀಗ 'ಫುಟ್‌ಬಾಲ್ ಮೆಂಟರ್' ಎಂಬ ಹೊಸ ಹುದ್ದೆ. ಫುಟ್‌ಬಾಲ್ ಪಟುಗಳಿಗೆ ವೇಗವಾಗಿ ಓಡುವುದು ಹೇಗೆ.., ಹಾಗೆ ಓಡುವಾಗ ಸ್ಟ್ಯಾಮಿನಾ ಕುಂದದಂತೆ ನೋಡಿಕೊಳ್ಳುವುದು ಹೇಗೆ- ಎಂದು ಕಲಿಸುವ ಗುರುವಿನ ಕೆಲಸ. ಭಾರತೀಯ ಮೂಲದ, ಕೆನಡಾದಲ್ಲಿ ನೆಲೆಸಿರುವ ಗುರುವೀರ್ ಮತ್ತು ಕರಣ್‌ವೀರ್ ಎಂಬ ಇಬ್ಬರು ಶಿಷ್ಯರನ್ನು ಕಟ್ಟಿಕೊಂಡು ಗೋವಾದ ಸಲ್ಗಾಂವ್‌ಕರ್ ಕ್ಲಬ್‌ನ ಅಂಗಳದಲ್ಲಿ ಬಿಟ್ಟಿದ್ದಾರೆ. ಈ ಕ್ಲಬ್‌ನ ಪರವಾಗಿ ಆಡುವ ಈ ಇಬ್ಬರಿಗೂ ಮುಂದೊಮ್ಮೆ ಭಾರತ ತಂಡದಲ್ಲಿ ಆಡುವ ಕನಸು!

ಟ್ರ್ಯಾಕ್‌ನಿಂದ ನಿಷೇಧಿಸಲ್ಪಟ್ಟ ಬಳಿಕ ಬೆಂಜಮಿನ್ ಸಿಂಕ್ಲೇರ್ (ಇದು ಬೆನ್‌ನ ಒರಿಜಿನಲ್ ಹೆಸರು) ಜಮೈಕಾದಲ್ಲೇ ಹೊಸ ವೃತ್ತಿ ಆರಂಭಿಸಿದ. 'ಈಗಲೂ ಹೇಳುತ್ತೇನೆ- ನಾನು ನಿರ್ದೋಷಿ. ನಾನು ಉದ್ದೀಪನಾ ಮದ್ದು ಸೇವಿಸಿಲ್ಲ. ಆದರೆ ಡೋಪ್ ಟೆಸ್ಟಿಂಗ್‌ನಲ್ಲಿ ಪಾಸಿಟಿವ್ ಬಂದ ಬಳಿಕ ನನ್ನನ್ನು ಯಾರು ನಂಬುತ್ತಾರೆ? ಜೀವನಪೂರ್ತಿ ಆ ಅವಮಾನದೊಂದಿಗೇ ನಾನು ಬದುಕಬೇಕು. ಇನ್ನೇನು ಮಾಡಲಾಗುತ್ತದೆ? ಆದರೆ ವೇಗದ ಓಟ, ಫುಟ್‌ಬಾಲ್ ಮತ್ತು ಕ್ರೀಡೆಯ ಮೇಲಿನ ನನ್ನ ಮೋಹ ಇಂದಿಗೂ ಕಡಿಮೆಯಾಗಿಲ್ಲ' ಎಂದಿದ್ದಾರೆ ಬೆನ್. 50 ಹರೆಯದ ಬೆನ್‌ಗೆ ಊರಲ್ಲಿ ಆರು ವರ್ಷದ ಮೊಮ್ಮಗಳ ಜತೆ ಜೀವನ ಕಳೆಯುವುದು ಖುಷಿಯ ಸಂಗತಿಯೇ ಹೌದಂತೆ.

ಅಂದ ಹಾಗೆ ಬೆನ್ ಇದೀಗ ತಮ್ಮ ಆತ್ಮಚರಿತ್ರೆಯನ್ನು ಬರೆದಿದ್ದಾರೆ. 'ಸಿಯೋಲ್ ಟು ಸೋಲ್' (ಸಿಯೋಲ್‌ನಿಂದ ಆತ್ಮದವರೆಗೆ) ಎನ್ನುವುದು ಅದರ ಹೆಸರು. ಆಗಸ್ಟ್‌ನಲ್ಲಿ ಬಿಡುಗಡೆಯಾಗಲಿದೆ. 'ಜಮೈಕಾದ ಚೇತೋಹಾರಿ ಬಾಲ್ಯದಿಂದ ಹಿಡಿದು ಸೋಲ್‌ನಲ್ಲಿ ಆದ ಅವಮಾನದವರೆಗೆ ಎಲ್ಲವನ್ನು ಅದರಲ್ಲಿ ಬರೆದಿದ್ದೇನೆ. ನಾನೇ ಲೇಖಕ, ನಾನೇ ಪ್ರಕಾಶಕ' ಎನ್ನುವುದು ಬೆನ್ ಸ್ಪಷ್ಟನುಡಿ. ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65